Completed C/S
14/2/23

I Round

# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 185
2. ಸದಸ್ಯರ ಹೆಸರು : ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನಸಭೆಯಿಂದ ಚುನಾಯಿತರಾದವರು)
3. ಉತ್ತರಿಸಬೇಕಾದ ದಿನಾಂಕ : 14-02-2023
4. ಉತ್ತರಿಸುವ ಸಚಿವರು : ನಗರಾಭಿವೃದ್ಧಿ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಬೀದರ್ ನಗರದಲ್ಲಿ ಹಲವು ಸಿಸಿ ರಸ್ತೆಗಳನ್ನು ಅಗೆದು ಹಾಳುಮಾಡಿ ಯುಜಿಡಿ ಕಾಮಗಾರಿ ಮಾಡಿದ ನಂತರ ಸರಿಯಾಗಿ ರಸ್ತೆ ನಿರ್ಮಾಣ ಮಾಡದಿರುವ ಬಗ್ಗೆ, ಕಳೆದ ಅಧಿವೇಶನದಲ್ಲಿ ಪ್ರಶ್ನಿಸಲಾಗಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮದಡಿ (NKUSIP) ಬೀದರ್ ನಗರದಲ್ಲಿ ಒಳಚಂಡಿ ಜಾಲ ಅಳವಡಿಕೆ ಹಾಗೂ ತ್ಯಾಜ್ಯ ನೀರು ಸಂಸ್ಕರಣ ಘಟಕ ನಿರ್ಮಾಣ ಕಾಮಗಾರಿಗಾಗಿ ಕತ್ತರಿಸಿದ ಅಗಲಕ್ಕೆ ಸೀಮಿತಗೊಳಿಸಿ ಸಿಸಿ ರಸ್ತೆಗಳನ್ನು ಪುನರ್ ನಿರ್ಮಾಣ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆ. |
| (ಆ) | ಹಾಗಿದ್ದಲ್ಲಿ, ದುರಸ್ತಿಯಾದ ಸಿಸಿ ರಸ್ತೆ ಮತ್ತು ಕಳಪೆ ಕಾಮಗಾರಿ ಮಾಡಿದ ಗುತ್ತಿಗೆದಾರರ ವಿರುದ್ಧ ಕ್ರಮ ಜರುಗಿಸುವುದಾಗಿ ಕಳೆದ ಅಧಿವೇಶನದಲ್ಲಿ ಆಶ್ವಾಸನೆ ನೀಡಿದ್ದು ಇದುವರೆಗೆ ಕ್ರಮ ಜರುಗಿಸದಿರಲು ಕಾರಣವೇನು: | ಎನ್‌ಕೆಯುಎಸ್‌ಐಪಿ ಯೋಜನೆಯಡಿ ಬೀದರ್ ನಗರದಲ್ಲಿ ಒಳಚಂಡಿ ಜಾಲ ಅಳವಡಿಕೆ ಹಾಗೂ ತ್ಯಾಜ್ಯ ನೀರು ಸಂಸ್ಕರಣ ಘಟಕ ನಿರ್ಮಾಣ ಕಾಮಗಾರಿಗಾಗಿ ಕತ್ತರಿಸಿದ ಅಗಲಕ್ಕೆ ಸೀಮಿತಗೊಳಿಸಿ ಸಿಸಿ ರಸ್ತೆಗಳನ್ನು ಪುನರ್‌ನಿರ್ಮಾಣ ಮಾಡಿ ಪೂರ್ಣಗೊಂಡ ಅಸ್ತಿಯನ್ನು ನಗರಸಭೆಗೆ ಈಗಾಗಲೇ ಹಸ್ತಾಂತರಿಸಲಾಗಿದೆ. ಯೋಜನೆಯಡಿ ಪುನರ್‌ನಿರ್ಮಾಣ ಮಾಡಿದ ರಸ್ತೆಗಳು ಕಳಪೆಯಾಗಿರುವ ಬಗ್ಗೆ ಯಾವುದೇ ದೂರುಗಳು ಬಂದಿರುವುದಿಲ್ಲ. |
| (ಇ) | ಯುಜಿಡಿ ಮಾಡುವಾಗ ಸರ್ಕಾರದಿಂದ ಯಾವ ಮಾನದಂಡ ಅನುಸರಿಸಲಾಗುವುದು; ಇಂತಹ ಕಳಪೆ ಕಾಮಗಾರಿಗೆ ಹೊಣೆಗಾರರು ಯಾರು? | Central Public Health & Environmental Engineering Organisation (CPHEEO) ನಿಯಮಾನುಸಾರ ಆಯಾ ಸ್ಥಳೀಯ ಸಂಸ್ಥೆಯ ಜನಸಾಂದ್ರತೆ ಆಧಾರದ ನಾಗರೀಕರ ಬೇಡಿಕೆ ಮೇಲೆ ಒಳಚರಂಡಿ ಯೋಜನೆಯನ್ನು ರೂಪಿಸಲಾಗುವುದು. ಕಾಮಗಾರಿಯನ್ನು ಕೆ.ಟಿ.ಪಿ.ಪಿ ಕಾಯ್ದೆಯ ನಿಯಮಾನುಸಾರ ಟೆಂಡರ್ ಕರೆದು ಗುತ್ತಿಗೆ ನೀಡಲಾಗುವುದು. ಗುತ್ತಿಗೆದಾರರು ಕಳಪೆ ಕಾಮಗಾರಿ ನಿರ್ವಹಿಸಿದಲ್ಲಿ ಕರಾರಿನ ನಿಯಮಾನುಸಾರ ಗುತ್ತಿಗೆದಾರರ ಮೇಲೆ ಕ್ರಮ ಜರುಗಿಸಲಾಗುವುದು. |

ಕಡತ ಸಂಖ್ಯೆ: ನಅಇ 29 ಪಿ.ಆರ್.ಜೆ 2022

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು.

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು